ಬಂದಿರುವುದಿಲ್ಲ. ಆದರೆ, ಬಿಜಾಪುರ ತಾಲ್ಲೂಕಿನಿಂದ ಬಂದ ಪ್ರಸ್ತಾವನೆಗಳನ್ನು ಮೇಲು ರುಜು ಮಾಡಿ 2.5 ಲಕ್ಷ ವೆಚ್ಚ ಭರಿಸಲಾಗಿದೆ.

ಕ್ರಮ ಕೈಗೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ.

ಪರಿಹಾರ ನೀಡುವುದು

262 (540) ಡಾ. ಶರಣ ಪ್ರಕಾಶ ರುದ್ರಪ್ಪ ಪಾಟೀಲ್ :– ಮಾನ್ಯ ಮುಖ್ಯಮಂತ್ರಿಗಳು ದಯಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) 2009–10 ಸಾಲಿನಲ್ಲಿ ಸೇಡಂ ತಾಲ್ಲೂಕು/ ಮತ ಕ್ಷೇತ್ರದಲ್ಲಿ ಎಷ್ಟು ರೈತರ ಹಾಗೂ ಎಷ್ಟು ಎಕರೆ ತೊಗರಿ ಬೆಳೆ ಸುಟ್ಟಿದೆ (ವಿವರ ನೀಡುವುದು) ಹಾಗೂ ಸರ್ಕಾರದ ಆದೇಶದ ಪ್ರಕಾರ ಸುಟ್ಟಿರುವ ರೈತರಿಗೆ ಪರಿಹಾರ ಒದಗಿಸಿದೆಯೇ ;

(ಆ) ಸರಕಾರ ಸ್ಪಷ್ಟ ನಿರ್ದೇಶನವಿದ್ದರೂ ಪರಿಹಾರ ನೀಡದೇ ಇರುವುದಕ್ಕೆ ಕಾರಣ ಮತ್ತು ಯಾವಾಗ ಪರಿಹಾರ ನೀಡಲಾಗುವುದು?

ಶ್ರೀ ಡಿ.ವಿ. ಸದಾನಂದಗೌಡ (ಮುಖ್ಯಮಂತ್ರಿಗಳು):–

(ಅ) ತೊಗರಿ ಬೆಳೆ ಸುಟ್ಟ ಬಗ್ಗೆ ಅರ್ಜಿಗಳು ಇರುವುದಿಲ್ಲ.

(ಆ) ಉದ್ಭವಿಸುವುದಿಲ್ಲ.

TMC ಯಲ್ಲಿ ಖಾಲಿಯಿರುವ ಹದ್ದೆಗಳು

263 (541) ಡಾ. ಶರಣ ಪ್ರಕಾಶ ರುದ್ರಪ್ಪ ಪಾಟೀಲ್ (ಸೇಡಂ) :– ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳು ಹಾಗೂ ಸಾರ್ವಜನಿಕ ಉದ್ದೇಮೆಗಳ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ಸೇಡಂ ಪುರಸಭೆಯಲ್ಲಿ ಬಹಳಷ್ಟು ಹುದ್ದೆಗಳು ಖಾಲಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಲ್ಲಿ, ಸರಕಾರ ತೆಗೆದುಕೊಳ್ಳುತ್ತಿರುವ ಕ್ರಮವೇನು ;

(ಆ) ಸೇಡಂ ತಾಲ್ಲೂಕಿನ ಮಳಖೇಡ ಗ್ರಾಮ/ಪಂಚಾಯತ್ – ಪಟ್ಟಣ ಪಂಚಾಯತ್‌ಯಾಗಿ ಮೇಲ್ದರ್ಜೆಗೇರಿಸುವ ಪ್ರಸ್ತಾವನೆ ಸರಕಾರದ ಮುಂದಿದೆಯೇ; ಹಾಗಿದ್ದಲ್ಲಿ, ಯಾವಾಗ ಮೇಲ್ದರ್ಜೆಗೇರಿಸಲಾಗುವುದು ?

ಶ್ರೀ ಬಾಲಚಂದ್ರ ಲ. ಜಾರಕಿಹೋಳಿ (ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳು ಹಾಗೂ ಸಾರ್ವಜನಿಕ ಉದ್ದೇಮೆಗಳ ಸಚಿವರು):–

(ಅ) ಸೇಡಂ ಪುರಸಭೆಯಲ್ಲಿ ಒಟ್ಟು ಮಂಜೂರಾದ 97 ಹುದ್ದೆಗಳ ಪೈಕಿ 89 ಹುದ್ದೆಗಳು ಭರ್ತಿಯಾಗಿದ್ದು, 8 ಹುದ್ದೆಗಳು ಖಾಲಿ ಇರುತ್ತದೆ. ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುವುದು.

(ಆ) ಇಲ್ಲ

2011ರ ಜನಗಣತಿ ಕಾರ್ಯ ಮುಗಿದಿರುತ್ತದೆ. ಆದರೆ ಕೇಂದ್ರ ಸರ್ಕಾರದ ರಿಜಿಸ್ಟಾರ್ ಜನರಲ್ ಹಾಗೂ ಜನಗಣತಿ ಆಯುಕ್ತರು ನಗರ ಹಾಗೂ ಗ್ರಾಮೀಣ ಸ್ಥಳೀಯ ಸಂಸ್ಥೆಗಳ ಜನಗಣತಿಯ ಅಂಕಿ-ಅಂಶಗಳನ್ನು ಅಧಿಕೃತವಾಗಿ ಪ್ರಕಟಿಸಿರುವುದಿಲ್ಲ ಅಧಿಕೃತವಾಗಿ ಪ್ರಕಟಿಸಿದ ನಂತರ ಮಳಖೇಡ ಗ್ರಾಮ ಪಂಚಾಯತಿಯನ್ನು ಪಟ್ಟಣ ಪಂಚಾಯತಿಯನ್ನಾಗಿ ರಚಿಸುವ ಬಗ್ಗೆ ಕರ್ನಾಟಕ ಪುರಸಭೆ ಕಾಯ್ದೆ 1964ರ ಕಲಂ 3,9 ಮತ್ತು 349 ರನ್ವಯ ವಿಷಯವನ್ನು ನಿಯಮಾನುಸಾರ ಪರಿಶೀಲಿಸಲಾಗುವುದು.

ಕೃಷಿ ಮಾರುಕಟ್ಟೆ ಕಮಿಟಿ ಹಾಗೂ ಮಳಿಗೆಗಳ ಮಾರಾಟ

264 (628) ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ (ಭಾಲ್ಕಿ) :- ಮಾನ್ಯ ಸಹಕಾರ ಮತ್ತು ಕೃಷಿ ಮಾರುಕಟ್ಟೆ ಸಚಿವರು ದಯಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:-

(ಅ) ಬೀದರ್ ಜಿಲ್ಲೆಯಲ್ಲಿನ ಕೃಷಿ ಮಾರುಕಟ್ಟೆ ಕೇಂದ್ರದಲ್ಲಿ ಎಷ್ಟು ಕಮಿಟಿಗಳು ಕಾರ್ಯ ನಿರ್ವಹಿಸುತ್ತಿವೆ;

(ಆ) ಬೀದರ್ ಜಿಲ್ಲೆಯಲ್ಲಿನ ಕೃಷಿ ಮತ್ತು ಮಾರುಕಟ್ಟೆ ಕೇಂದ್ರದಿಂದ ಹಂಚಲಾಗಿರುವ ವ್ಯಾಪರ ಮಳಿಗೆಗಳು ಪಾರದರ್ಶಕವಾಗಿ ಹಂಚಲಾಗಿದೆಯೇ ;

(ಇ) ಕೃಷಿ ಮಾರುಕಟ್ಟೆ ಕೇಂದ್ರಕ್ಕೆ ಮಳಿಗೆಗಳಿಗಾಗಿ ಬೇಡಿಕೆ ಬಂದಿರುವ ಅರ್ಜಿಗಳಲ್ಲಿ ಬಾಕಿ ಇರುವ ಅರ್ಜಿ ಎಷ್ಟು ?

ಶ್ರೀ ಲಕ್ಷ್ಮಣ ಸ. ಸವದಿ (ಸಹಕಾರ ಮತ್ತು ಕೃಷಿ ಮಾರುಕಟ್ಟೆ ಸಚಿವರು):-

(ಅ) ಬೀದರ್ ಜಿಲ್ಲೆಯಲ್ಲಿ 05 ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಲ್ಲಿ ಚುನಾಯಿತ ಆಡಳಿತ ಮಂಡಳಿಗಳು ಕಾರ್ಯ ನಿರ್ವಹಿಸುತ್ತಿವೆ. ಅವುಗಳೆಂದರೆ, ಬೀದರ್, ಹುಮ್ನಾಬಾದ್, ಭಾಲ್ಕಿ, ಔರಾದ್, ಬಸವಕಲ್ಯಾಣ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಾಗಿವೆ.

(ಆ) ಹೌದು

(ಇ) ಅಧಿಸೂಚಿತ ಕೃಷಿ ಉತ್ಪನ್ನಗಳಲ್ಲಿ ವ್ಯವಹರಿಸಲು ಲೈಸೆನ್ಸ್ ಪಡೆದ ಕಾರ್ಯಕರ್ತರಿಗೆ ಆಸ್ತಿ ಹಂಚಿಕೆ ನಿಯಾಮಾವಳಿ 2004ರ ನಿಯಮ 13ರ ಮೇರೆಗೆ